ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4191

ವಿಧಾನಸಭೆ ಸದಸ್ಯರ ಹೆಸರು: ಶ್ರೀ ಅಂಗಾರ ಎಸ್. (ಸುಳ್ಯ)

ಉತ್ತರಿಸುವ ಸಚಿವರು : ಶ್ರೀ ಪಿ.ಜಿ.ಆರ್ ಸಿಂಧ್ಯ
ಬೃಹತ್ ಮತ್ತು ಮಧ್ಯಮ ಕೈಗಾರಿಕೆ,
ಸಣ್ಣ ಕೈಗಾರಿಕೆ ಮತ್ತು ಮೂಲ
ಸೌಲಭ್ಯ ಸಚಿವರು

ವಿಷಯ : ಕಂಪ್ಯೂಟರ್ ಪಹಣಿ ಪತ್ರ
ಪಡೆಯುವಲ್ಲಿ ತೊಂದರೆ

ಸಂಖ್ಯೆ	ಪ್ರಶ್ನೆ	ಉತ್ತರ
1	ಸುಳ್ಯ ತಾಲ್ಲೂಕು ಕಛೇರಿಯಲ್ಲಿ ಕಂಪ್ಯೂಟರ್ ಪಹಣಿ ಪತ್ರ (ಆರ್.ಟಿ.ಸಿ.) ನೋಂದಾವಣಿ ಮಾಡುವಾಗ ಸರ್ವೆಗಳು ತಪ್ಪಾಗಿ ಮುದ್ರಿತವಾಗಿ, ತಿದ್ದುಪಡಿ ಮಾಡ ಬೇಕಾದರೆ ಹಣ ಪಾವತಿಸ ಬೇಕಾಗಿದ್ದು, ಒಬ್ಬ ರೈತ ಪಹಣಿ ಪತ್ರಕ್ಕಾಗಿ ಎರಡು ಬಾರಿ ಹಣವನ್ನು ಪಾವತಿಸುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?	ಇಲ್ಲ
2	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?	ಅನ್ವಯಿಸುವುದಿಲ್ಲ

ಶ್ರೀ ಅಂಗಾರ ಎಸ್. (ಸುಳ್ಯ): ಮಾನ್ಯ ಉಪಾಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ನನ್ನ ಮೂಲ ಪ್ರಶ್ನೆ ಏನೆಂದರೆ ಸುಳ್ಯ ತಾಲ್ಲೂಕು ಕಛೇರಿಯಲ್ಲಿ ಕಂಪ್ಯೂಟರ್ ವಿಭಾಗದಲ್ಲಿ ಪಹಣಿ ಪತ್ರ (ಆರ್.ಟಿ.ಸಿ.) ಯನ್ನು ನೋಂದಾವಣಿ ಮಾಡುವಾಗ ಸರ್ವೆನಂಬರುಗಳು ತಪ್ಪಾಗಿ ಅಥವಾ ಮುದ್ರಿತವಾಗಿ, ಅದನ್ನು ತಿದ್ದುಪಡಿ ಮಾಡಬೇಕಾದರೆ ಎರಡು ಬಾರಿ ಹಣವನ್ನು ಕಟ್ಟಬೇಕು ಎನ್ನುವಂತಹ ಪರಿಸ್ಥಿತಿ ಬಂದಿದೆ ಎನ್ನುವುದನ್ನು ಹೇಳಿದೆ. ಅದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಉಪಧ್ಯಕ್ಷರೇ, ನಮ್ಮ ಸುಳ್ಯ ತಾಲ್ಲೂಕಿನಲ್ಲಿ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಸುಳ್ಯ ತಾಲ್ಲೂಕಿನಲ್ಲಿ ಒಂದು ಸರ್ವೆ ನಂಬರ್ ಇದೆ. ಆ ಸರ್ವೆ ನಂಬರ್‌ನ್ನು ಮಾತ್ರ ಪಹಣಿ ಪತ್ರದಲ್ಲಿ ಎಂಟ್ರಿ ಮಾಡುತ್ತಾರೆ. ಆದರೆ ಆ ಸರ್ವೆ ನಂಬರ್‌ನಲ್ಲಿರುವಂತಹ ಸಬ್ ಡಿವಿಸನ್ ಏನು ಇದೆ ಅದನ್ನು ಬಿಟ್ಟು ನೋಂದಣಿ ಮಾಡಿದಾಗ ಒಂದು ಮಾತ್ರ ನಮಗೆ ಪಹಣಿಪತ್ರವನ್ನು ಕೊಡುತ್ತಾರೆ ಫ್ರೀ ಆಗಿ, ಆದರೆ ಫ್ರೀಯಾಗಿ ಪಡೆದುಕೊಂಡ ಆ ಆರ್.ಟಿ.ಸಿ. ಯನ್ನು ನೋಡಿದ ಮೇಲೆ ಮತ್ತೆ ನಾವು ತಿದ್ದುಪಡಿ ಮಾಡಿಕೊಳ್ಳಬೇಕಾದರೆ ದುಡ್ಡು ಕಟ್ಟಬೇಕು. ತಿದ್ದುಪಡಿಯಾದ ಮೇಲೆ ಮತ್ತೆ ನಾವು ಆ ಆರ್.ಟಿ.ಸಿ.ಯನ್ನು ಪಡೆಯಬೇಕಾದರೆ ದುಡ್ಡು ಕಟ್ಟಬೇಕು. ಅದೇ ರೀತಿಯಲ್ಲಿ ಒಬ್ಬ ರೈತನಿಗೆ ಒಂದು 7–8 ಸರ್ವೆ ನಂಬರ್‌ಗಳು ಇದ್ದರೆ ಅದರಲ್ಲಿ 7–8 ಸಬ್ ಡಿವಿಜನ್‌ಗಳು ಇದ್ದರೆ ಅವನು ಸುಮಾರು 8 ಆರ್.ಟಿ.ಸಿ.ಗಳಿಗೆ ಎರಡು ಬಾರಿ ದುಡ್ಡು ಕಟ್ಟುವಂತಹ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಇಲ್ಲಿ ತಾಲ್ಲೂಕು ಕಛೇರಿಯಿಂದ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ಸರಿಪಡಿಸುವಂತಹ ಕೆಲಸ ಮಾಡಬೇಕು ಮತ್ತು ತಪ್ಪು ಮಾಹಿತಿ ಕೊಟ್ಟ ಸಂಬಂಧಪಟ್ಟ ಅಧಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಪಿ.ಜಿ.ಆರ್ ಸಿಂಧ್ಯ: (ಮಾನ್ಯ ಕಂದಾಯ ಸಚಿವರ ಪರವಾಗಿ ಬೃಹತ್ ಕೈಗಾರಿಕಾ ಸಚಿವರು ಉತ್ತರ ನೀಡುತ್ತಾರೆ) ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿರತಕ್ಕಂಥ ವರದಿ ಆಧಾರದ ಮೇಲೆ ನಾನು ಉತ್ತರವನ್ನು ಒದಗಿಸಿದ್ದೇನೆ. ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಮತ್ತು ಆ ರೀತಿಯಾಗಿ ಖಚಿತವಾಗಿ ಮಾನ್ಯ ಶಾಸಕರು ಹೇಳುತ್ತಿರುವುದರಿಂದ ಅದರ ಬಗ್ಗೆ ಖಂಡಿತವಾಗಿ ನಾನು ವಿಚಾರಣೆ

ಮಾಡಿಸುತ್ತೇನೆ. ಆ ರೀತಿ ದುಡ್ಡನ್ನು ಸರ್ಕಾರದ ಸುತ್ತೋಲೆಗಳನ್ನು ಬಿಟ್ಟು ಏನಾದರೂ ವಸೂಲಾತಿ ಮಾಡಿದ್ದರೆ ಅದನ್ನು ವಾಪಸ್ಸು ಕೊಡಿಸತಕ್ಕಂಥ ಕ್ರಮವನ್ನು ಸಹ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್.ಯೋಗಿಶ್ವರ್ ಭಟ್: ಮಾನ್ಯ ಅಧ್ಯಕ್ಷರೇ, ಬೇರೆ ತಾಲ್ಲೂಕುಗಳಲ್ಲೂ ಸಹ ಇದೇ ದುಸ್ಥಿತಿ ಬಂದಿದೆ. ಏಕೆಂದರೆ, ಇಲ್ಲಿ ನೋಂದಾವಣೆ ಮಾಡುವಂತಹ ತಪ್ಪುಗಳು ಸಹ ಯಾರು ಆರ್.ಟಿ.ಸಿ. ಗೆ ಅಪ್ಲೈ ಮಾಡಿದ್ದಾರೆ ಅವರು ಅದಕ್ಕೆ ಬದ್ಧರಾಗುವಂತಾದ್ದು. ಅವರು ಅದಕ್ಕೆ ಹಣ ಕಟ್ಟುವಂತಹ ದುಸ್ಥಿತಿ ಬಂದಿದೆ. ಇದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಎಲ್ಲಾ ಮಾಹಿತಿಗಳನ್ನು ಫೀಡ್ ಬ್ಯಾಕ್ ಮಾಡುವಾಗ ಎಲ್ಲಿಯಾದರೂ ತೊಂದರೆ ಬಂದರೆ ಸಂಬಂಧಪಟ್ಟವರೆ ಅದನ್ನು ಸರಿಪಡಿಸಿಕೊಡುವಂತಹ ಜವಾಬ್ದಾರಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ವಹಿಸಿಕೊಡಬೇಕು. ಯಾವ ಕಾರಣಕ್ಕೂ ಫೈನ್ ಅಥವಾ ಅಡಿಶನಲ್ ಹಣ ಕಟ್ಟುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಪಿ.ಜಿ.ಆರ್ ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈ ಗೌರ್ನನ್ಸ್ ಪ್ರಧಾನ ಕಾರ್ಯದರ್ಶಿಗಳು ಯಾರು ಇದ್ದಾರೆ ಅವರಿಗೆ ನಾನು ಇವತ್ತು ಸೂಚನೆಯನ್ನು ಕೊಡುತ್ತೇನೆ. ಈ ರೀತಿ ಸರ್ಕಾರದ ಸುತ್ತೋಲೆಗಳನ್ನು ಮೀರಿ ಅವರು ಏನಾದರೂ ಹಣವನ್ನು ದಂಡದ ರೂಪದಲ್ಲಿ ಅಥವಾ ಬೇರೆ ರೀತಿಯಲ್ಲಿ ಎಕ್ಸಸ್ ಫೀಜನ್ನು ಕಲೆಕ್ಟ್ ಮಾಡಿದ್ದರೆ ಅದನ್ನು ವಾಪಸ್ಸು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಇತರೇ ಮಾನ್ಯ ಸದಸ್ಯರುಗಳು ಏನು ಬೇರೆ ಕಡೆ ಇದೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ ಅದರ ಬಗ್ಗೆ ನಾನು ಖಂಡಿತವಾಗಿ ಪರಿಶೀಲನೆ ಮಾಡುವ ಭರವಸೆಯನ್ನು ಕಂದಾಯ ಸಚಿವರ ಪರವಾಗಿ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದಕ್ಕೆ ಬಯಸುತ್ತೇನೆ, ಇದೆಲ್ಲಾ ಭೂಮಿ–4 ಆಗಿದೆ. ಸಾಫ್ಟ್‌ವೇರ್ ಡವಲಪ್‌ಮೆಂಟ್ ಮಾಡಿದ್ದಾರೆ. ಆದರೆ ಒಂದೊಂದು ಜಿಲ್ಲೆಗೆ ಒಂದೊಂದು ಏಜೆನ್ಸಿಗೆ ಇವರು ಕನ್‌ಸಲ್‌ಟೇಶನ್ ಏಜೆನ್ಸಿಗೆ ಕೊಟ್ಟಿದ್ದಾರೆ. ಅವರ ಮೇಲೆ ಯಾವ ಹಿಡಿತವೂ ಇಲ್ಲ. ಅವರು ಅದನ್ನು ಟೈಂ ಟು ಟೈಂ ಅಪ್‌ಡೇಟ್ ಮಾಡುವುದಿಲ್ಲ. ಆ ಏಜೆನ್ಸಿಗಳು ನೀವು ಏಜನ್ಸಿ ಕೊಟ್ಟೀದ್ದೀರಲ್ಲ ಈ ಭೂಮಿ

ಕೇಂದ್ರವನ್ನು ನಡೆಸುವುದಕ್ಕೆ ಅವರು ಇದನ್ನು ಟೈಂ ಟು ಟೈಂ ಅಪ್‌ಡೇಟ್ ಮಾಡದೇ ಇರುವುದರಿಂದ ಗೊಂದಲ ಇಡೀ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಇದೆ. ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದಲ್ಲಿಯೇ ಸುಮಾರು 3 ಸಾವಿರ ಪಹಣಿ ಎಂಟ್ರಿ ಮಾಡುವುದು ಹಾಗೆಯೇ ಇದೆ. ಬೇರೆ ಕ್ಷೇತ್ರಗಳಲ್ಲೂ ಇದೆ. ಹಾಗಾಗಿ ಸಾಫ್ಟ್‌ವೇರ್‌ನ್ನು ಅಪ್‌ಡೇಟ್ ಮಾಡುವುದಕ್ಕೆ ಯಾವ ಯಾವ ಕಂಪನಿಗಳಿಗೆ, ಪ್ರವೇಟ್‌ನವರಿಗೆ ಕನ್ಸಲ್ಟೆನ್ಸಿಯವರಿಗೆ ನೀಡಿದ್ದಾರೋ ಅವರು ಟೈಂ ಟು ಟೈಂ ಅಪ್‌ಡೇಟ್ ಮಾಡುವಂತೆ ಕ್ರಮ ಕೈಗೊಳ್ಳಿ.

ಶ್ರೀ ಪಿ.ಜಿ.ಆರ್ ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಪ್ರವೇಟ್ ಏಜೆನ್ಸಿಯವರಿಗೆ ಏನು ಕೊಟ್ಟಿದ್ದಾರೆ ಅದನ್ನು ಕೊಟ್ಟಿರತಕ್ಕಂಥಾದ್ದು ಪರ್ಮನೆಂಟ್ ಏನೂ ಅಲ್ಲ. ಪ್ರತಿ ವರ್ಷ ಇಂತಹ ಪ್ರಾಬ್ಲಂಗಳು ಬಂದಾಗ ಸಲ್ಯೂಷನ್ ಕೊಡುವಂತಾದ್ದು ಮತ್ತು ಅದನ್ನು ಮಾರ್ಪಾಡು ಮಾಡಿಕೊಳ್ಳುವಂತಾದ್ದು ಕರ್ತವ್ಯವಾಗುತ್ತದೆ. ಆದ್ದರಿಂದ ನಾನು ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸಿ ಅಗತ್ಯವಿದ್ದರೆ ಅದನ್ನು ಅಪ್‌ಡೇಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎನ್ನುವಂತಹ ಸೂಚನೆಯನ್ನು ಸಹ ಕೊಡುತ್ತೇನೆ

ಶ್ರೀ ಎ ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೇ, ಖಾಸಗಿಯವರಿಗೆ ಪಹಣಿಗಳನ್ನು ಕೊಟ್ಟು ತಿದ್ದುಪಡಿ ಮಾಡಿ ಸಿಕ್ಕಿಹಾಕಿಕೊಂಡು ಕ್ರಿಮಿನಲ್ ಕೇಸ್ ಆಗಿದೆ. ಈ ಬಗ್ಗೆ ನ್ಯಾಯಾಲಯಕ್ಕೆ ಹೋಗಿದೆ.....